ಅಸಲು ದಾವೆ ಸಂಖ್ಯೆ - 229/2017
ಪಿಡಬ್ಲ್ಯೂ - 01
ದಿನಾಂಕಃ 12.07.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ನಂ.1 ರಿಂದ 12 ರವರ ಪರ ಶ್ರೀ.ಸಿ ಎಸ್ ಎಂ ವಕೀಲರಿಂದ</u>**

ನಾನು ಈ ದಾವೆಯನ್ನು ನನ್ನ ಜಮೀನು ನನಗೆ ಕೊಡಬೇಕು ಅಂತಾ ಹೂಡಿರುತ್ತೇನೆ. ದಾವಾ ಆಸ್ತಿಗಳು ಜಮೀನು ಮತ್ತು ಮನೆ ವ ಖುಲ್ಲಾ ಜಾಗ ಇರುತ್ತವೆ. ಅವುಗಳ ಸರ್ವೆ ನಂ.23 ಕ್ಷೇತ್ರ 03 ಎಕರೆ 24 ಗುಂಟೆ, ಸರ್ವೆ ನಂ.48 ಕ್ಷೇತ್ರ 03 ಎಕರೆ 20 ಗುಂಟೆ, ಸರ್ವೆ ನಂ.103 ಕ್ಷೇತ್ರ 05 ಎಕರೆ, ಸರ್ವೆ ನಂ.108 ಕ್ಷೇತ್ರ 07 ಎಕರೆ ಇರುತ್ತವೆ. ಮನೆ ಮತ್ತು ಖುಲ್ಲಾ ಜಾಗದ ನಂಬರು ನನಗೆ ನೆನಪಿಲ್ಲ. ನನಗೆ ಚಕಬಂದಿ ಹೇಳಲು ಬರುವುದಿಲ್ಲ, ಏಕೆಂದರೆ ನನಗೆ ಅವರ ಹೆಸರುಗಳು ನೆನಪಿಲ್ಲ. ದಾವಾ ಆಸ್ತಿಗಳು ಮೂಲತಃ ಚನ್ನಬಸವ್ವ ಕಟಗಿ ಇವರ ಆಸ್ತಿಗಳು. ದಾವಾ ಆಸ್ತಿಗಳು ಮೂಲತಃ ಚನ್ನಬಸವ್ವ ಕಟಗಿ ಇವರ ಆಸ್ತಿಗಳು ಅಂತಾ ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ದಾವಾ ಆಸ್ತಿಗಳು ಹಿರಿಯರ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ನನ್ನ ವಾದಪತ್ರಕ್ಕೆ ಮತ್ತು ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ ಮಾಹಿತಿ ನಾನೇ ಕೊಟ್ಟಿದ್ದೇನೆ. ನಾನು ನನ್ನ ದಾವೆಯಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಆಗಾವ್ ಲಾವಣಿ ಅಂತಾ ಬರೆಸಿದ್ದೀರಾ ಎಂದರೆ ಬರೆಸಿಲ್ಲ. ಸಾಕ್ಷಿ ಮುಂದುವರೆದು ನನ್ನ ಚಿಕ್ಕಪ್ಪ ಲಾವಣಿ ಕೊಟ್ಟಿದ್ದ ಅದನ್ನು ಹೇಳಿ ಬರೆಸಿದ್ದೇನೆ ಅಂತಾ ನುಡಿಯುತ್ತಾರೆ. ಮೂಲ ಪುರುಷ ಭರಮಣ್ಣ ತಳವಾರ ಯಾವಾಗ ತೀರಿಕೊಂಡ ಹೇಳಲು ಬರುವುದಿಲ್ಲ. ಚನ್ನಬಸವ್ವ ಯಾವಾಗ ತೀರಿಕೊಂಡಿರುತ್ತಾಳೆ ಗೊತ್ತಿಲ್ಲ. ಬಸಪ್ಪ 1985 ರಲ್ಲಿ ತೀರಿಕೊಂಡಿರುತ್ತಾನೆ. ಬಸಪ್ಪ 1985 ರಲ್ಲಿ ತೀರಿಕೊಂಡಿರುತ್ತಾನೆ ಅಂತಾ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಆತ 1980 ಕ್ಕಿಂತ ಮುಂಚೆ ತೀರಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಯಲ್ಲಪ್ಪ ಯಾವಾಗ ತೀರಿಕೊಂಡಿರುತ್ತಾನೆ ಗೊತ್ತಿಲ್ಲ. ಹನಮಂತಪ್ಪ ಯಾವಾಗ ತೀರಿಕೊಂಡಿರುತ್ತಾನೆ ಗೊತ್ತಿಲ್ಲ, ಆದರೆ ಆತನನ್ನು ನಾನು ನೋಡಿದ್ದೇನೆ. 1985 ರಿಂದ ಆತನನ್ನು ನೋಡುತ್ತಾ ಬಂದಿದ್ದೇನೆ, ಆತ 8 ವರ್ಷದ ಹಿಂದೆ ತೀರಿಕೊಂಡಿರುತ್ತಾನೆ, ಆತನೇ ಹಿರಿತನ ಮಾಡುತ್ತಿದ್ದ. ಹನಮಂತಪ್ಪನ ಮರಣ ಪ್ರಮಾಣಪತ್ರ ಹಾಜರುಪಡಿಸಿಲ್ಲ. ಹನಮಂತಪ್ಪನ ಹೆಂಡತಿ ಹೆಸರು ಶಿವಕ್ಕ. ಅವರಿಗೆ 4 ಜನ ಮಕ್ಕಳು. ಅವರ ಹೆಸರು 1. ನಿಂಗಪ್ಪ, 2. ಸಾಮಕ್ಕ, 3. ಭರಮಪ್ಪ, 4. ನೇಹರಪ್ಪ.

ಯಲ್ಲಪ್ಪನ ಹೆಂಡತಿ ಹೆಸರು ಹಾಲಮ್ಮ. ಅವಳು ತೀರಿಕೊಂಡಿರುತ್ತಾಳೆ. ಅವಳ ಮರಣ ಪ್ರಮಾಣಪತ್ರ ಹಾಜರುಪಡಿಸಿಲ್ಲ. ಅವರಿಗೆ ಒಬ್ಬಳೇ ಮಗಳು ಅವಳ ಹೆಸರು ಪುಟ್ಟಮ್ಮ. ಸದರಿ

ಪುಟ್ಟವ್ವನ ಮಗನನ್ನು ಹಾಲಮ್ಮ ದತ್ತಕ ತೆಗೆದುಕೊಂಡಿರುತ್ತಾಳೆ ಆತನ ಹೆಸರು ಮಹಾಂತೇಶ 2 ನೇ ಪ್ರತಿವಾದಿ.

ಬಸಪ್ಪನಿಗೆ ಹೆಂಡರು ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ. ಬಸಪ್ಪನ ಹೆಂಡತಿ ಹೆಸರು ದೇವಕ್ಕ. ಅವರಿಗೆ ಮೂರು ಜನ ಮಕ್ಕಳು. ಅವರ ಹೆಸರು 1. ಪುಟ್ಟವ್ವ, 2. ಗುಡ್ಡಪ್ಪ ಅಂದರೆ ನಾನೇ, 3. ಮಲ್ಲಪ್ಪ. ಬಸಪ್ಪ ಮದುವೆಯಾಗಿರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಕ್ಕನ ಜನನ ದಿನಾಂಕ ಹೇಳಲು ಬರುವುದಿಲ್ಲ. ನನ್ನ ಜನನ ದಿನಾಂಕ ಹೇಳಲು ಬರುವುದಿಲ್ಲ, ಏಕೆಂದರೆ ನಾನು ಶಾಲೆ ಕಲಿತಿಲ್ಲ. ಮಲ್ಲಪ್ಪನ ಜನನ ದಿನಾಂಕ ಸಹ ಹೇಳಲು ಬರುವುದಿಲ್ಲ. ನಿಪಿ-33 ಎಂ ಆರ್ ನಂ.1565 ರಲ್ಲಿ ಬಸಪ್ಪನಿಗೆ ಹೆಂಡತಿ ಮಕ್ಕಳು ಯಾರು ಇರುವುದಿಲ್ಲ ಅಂತಾ ಬರೆದಿರುತ್ತಾರೆ ಎಂದರೆ ಆದರೆ ಅದು ಹೇಗೆ ಆಗಿರುತ್ತದೆ ನನಗೆ ಗೊತ್ತಿಲ್ಲ ನಾವು ಚಿಕ್ಕವರಿದ್ದೆವು, ಅದು ಸುಳ್ಳು ಇರುತ್ತದೆ. ನಾನು ಬಸಪ್ಪನಿಗೆ ಸಂಬಂಧ ಇಲ್ಲ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನಾಗಲೀ, ನನ್ನ ತಾಯಿಯಾಗಲೀ, ನನ್ನ ಸಹೋದರಿ, ಸಹೋದರ ಬಸಪ್ಪನಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿ ಅನುಕ್ರಮ ನಂ.2 ಬಸಪ್ಪ ತಂದೆ ಭರಮಪ್ಪ ತಳವಾರ 1954 ರಲ್ಲಿ ಈರಪ್ಪ ತಂದೆ ಚನ್ನಬಸಪ್ಪ ಮಾದೇನೂರು ಇವರಿಂದ ಖರೀದಿ ಹಿಡಿದ ಆಸ್ತಿ ಎಂದರೆ ನನ್ನ ತಂದೆ ಹಿಡಿದಿರುತ್ತಾರೆ. ಅದು ಹಿರಿಯರ ಆಸ್ತಿ ಅಲ್ಲ, ಅದು ಅವರ ಸ್ವಂತ ಆಸ್ತಿ ಎಂದರೆ ನಾನು ಚಿಕ್ಕವನಿದ್ದೆ ನನಗೆ ಗೊತ್ತಿಲ್ಲ.

ಅದೇ ರೀತಿ ದಾವಾ ಆಸ್ತಿ ಅನುಕ್ರಮ ನಂ.3 ನ್ನು ಬಸಪ್ಪ ಮತ್ತು ಅವನ ಸಹೋದರ ಹನಮಂತಪ್ಪ ಸೇರಿ ಖರೀದಿ ಹಿಡಿದ ಆಸ್ತಿ ಎಂದರೆ ಸರಿ. ಅದೇ ರೀತಿ ಸರ್ವೆ ನಂ.23/2 ಬಿ ಕ್ಷೇತ್ರ 03 ಎಕರೆ 02 ಗುಂಟೆ ಚನ್ನಬಸವ್ವಳಿಗೆ ಅವರ ತವರಮನೆಯವರು ದಾನ ಕೊಟ್ಟ ಆಸ್ತಿ ಎಂದರೆ ಸರಿ. ಅದೇ ರೀತಿ ದಾವಾ ಆಸ್ತಿ ಕ್ರಮ ಸಂಖ್ಯೆ 5,6 ಆಸ್ತಿಗಳು ಭರಮಪ್ಪನ ಆಸ್ತಿಗಳು ಎಂದರೆ ಸರಿ. ಅದೇ ರೀತಿ ವ್ಹಿಪಿಸಿ ನಂ.373 1 ನೇ ಪ್ರತಿವಾದಿಯ ಗಂಡ, ರಾಮಜಪ್ಪ ತಂದೆ ಚತರಪ್ಪ ಲಮಾಣಿ ಇವರಿಂದ ಖರೀದಿ ಹಿಡಿದ ಆಸ್ತಿ ಎಂದರೆ ಸರಿ. ಆದ್ದರಿಂದ 1 ನೇ ಪ್ರತಿವಾದಿ ಗಂಡ ತೀರಿಕೊಂಡ ನಂತರ ದಾಖಲೆಗಳಲ್ಲಿ ಅವಳ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ 2 ನೇ ಪ್ರತಿವಾದಿ ಮಹಾಂತೇಶ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾನೆ ಎಂದರೆ ಸರಿ.

ದಾವಾ ಆಸ್ತಿ ರಿಸನಂ.138 ಯಲ್ಲಪ್ಪನಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಜಮೀನು ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಗಳಲ್ಲಿ ಈಗಾಗಲೇ ವಾಟ್ನಿ ಮಾಡಿಕೊಂಡು ಅವರವರ ಭಾಗದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ರಿಸನಂ.138 ರಲ್ಲಿ 03 ಎಕರೆ ಜಮೀನನ್ನು 2 ನೇ ಪ್ರತಿವಾದಿ ಯಲ್ಲಪ್ಪ ಚನ್ನಪ್ಪ ತಳವಾರ ಇವರಿಗೆ ಖರೀದಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಆಸ್ತಿ ರಿಸನಂ.23/2ಬಿ ನ್ನು ಹನಮಂತಪ್ಪ ಇವರು ಬಸಪ್ಪ ನಾಗಪ್ಪ ಮಲ್ಲಣ್ಣನವರ ಪ್ರತಿವಾದಿ ನಂ.13 ಇವರಿಗೆ ಖರೀದಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಾನು ಕೇಳಿದಾಗ ಲಾವಣಿ ಕೊಟ್ಟಿರುತ್ತೇನೆ ಅಂತಾ ಹೇಳಿರುತ್ತಾನೆ ಅಂತಾ ಸ್ವತಃ ನುಡಿಯುತ್ತಾರೆ. ದಾವಾ ಆಸ್ತಿಗೂ ಮತ್ತು ನಮಗೂ ಯಾವುದೇ ರೀತಿಯ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾವು ಬಸಪ್ಪನ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ರೀತಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ ನಂ.13 ರವರ ಪರ ಶ್ರೀ. ವಿ ವಿ ಎಸ್ ವಕೀಲರಿಂದ**

ಹಿರೇಮರಳಿಹಳ್ಳಿಯಲ್ಲಿ ನಮ್ಮ ಮತ್ತು ಪ್ರತಿವಾದಿಯರ ಮನೆಗಳು ಅಕ್ಕಪಕ್ಕದಲ್ಲಿ ಇರುತ್ತವೆ. ದಾವಾ ಆಸ್ತಿಗಳ ದಾಖಲೆಗಳಲ್ಲಿ ನಮ್ಮ ಹೆಸರುಗಳು ಇರುವುದಿಲ್ಲ ಎಂದರೆ ಸರಿ. ನಿಪಿ-36 ಮತ್ತು 37 ಗಳನ್ನು ಖೊಟ್ಟಿಯಾಗಿ ಸೃಷ್ಟಿಸಿಕೊಂಡು ತಂದಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಬಸಪ್ಪನನ್ನು ಮದುವೆಯಾಗಿದ್ದಳು ಅಂತಾ ತೋರಿಸು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ-38 ರಿಂದ 41 ದಾಖಲೆಗಳು ಖೊಟ್ಟಿ ಇರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಈಗ ಪ್ರತಿವಾದಿಯರೇ ಸಾಗುವಳಿ ಮಾಡುತ್ತಾರೆ ಎಂದರೆ ನಾವು ಸಾಗುವಳಿ ಮಾಡುತ್ತೇವೆ, ಅವರು ಸಾಗುವಳಿ ಮಾಡುತ್ತಾರೆ. ದಾವಾ ಆಸ್ತಿಯನ್ನು ನಾವು ಸಾಗುವಳಿ ಮಾಡುತ್ತೇವೆ ಅಂತಾ ದಾವೆಯಲ್ಲಿ ಹೇಳಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ನಾವು ಸಾಗುವಳಿ ಮಾಡುತ್ತೇವೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ 01, 2017 ರಲ್ಲಿ 15 ಲಕ್ಷ ರೂಪಾಯಿ ಕಿಮ್ಮತ್ತು ಆಗುತ್ತಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆ ನನಗೆ ಕಿಮ್ಮತ್ತು ಗೊತ್ತಾಗುವುದಿಲ್ಲ ಅಂತಾ ನುಡಿಯುತ್ತಾರೆ. ಅದೇ ರೀತಿ ಸರ್ವೆ ನಂ.48/2ಬಿ 20 ಲಕ್ಷ ಕಿಮ್ಮತ್ತು ಆಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. 2017 ರಲ್ಲಿ 05 ಎಕರೆ ಜಮೀನಿಗೆ 25 ಲಕ್ಷ ಕಿಮ್ಮತ್ತು ಆಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಹಿರೇಮರಳಿಹಳ್ಳಿ

ಗ್ರಾಮದಲ್ಲಿ ಎಕರೆಗೆ 2017 ರಲ್ಲಿ ಎಷ್ಟು ಕಿಮ್ಮತ್ತು ಇತ್ತು ನನಗೆ ಗೊತ್ತಿಲ್ಲ. ನಾನು ದಾವೆಯನ್ನು ನಮ್ಮ ಹಿಸ್ಸೆಗಾಗಿ ಮಾಡಿರುತ್ತೇನೆ. ಎಷ್ಟು ಎಕರೆಗಾಗಿ ಮಾಡಿರುತ್ತೀರಿ ಎಂದರೆ 4 ಹಿಸ್ಸೆಗಾಗಿ ಮಾಡಿರುತ್ತೇನೆ. ಒಟ್ಟು ದಾವಾ ಆಸ್ತಿಗಳ ಕಿಮ್ಮತ್ತು ಸುಮಾರು 01 ಕೋಟಿ ರೂಪಾಯಿ ಮೇಲೆ ಆಗುತ್ತದೆ ಎಂದರೆ ಆಗಬಹುದು ನನಗೆ ಮಾಹಿತಿ ಇಲ್ಲ. ನಾವು ದಾವಾ ಆಸ್ತಿಗಳಲ್ಲಿ ಇವತ್ತಿನವರೆಗೂ ಕಬ್ಜಾ ವಹಿವಾಟಿ ಇಲ್ಲ ಎಂದರೆ ಸರಿಯಲ್ಲ. ನಾವು ಪ್ರತಿವಾದಿ ನಂ.1 ರಿಂದ 12 ನೇದವರ ಕುಟುಂಬಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಭರಮಣ್ಣನ ಮಗ ಬಸಪ್ಪನನ್ನು ನನ್ನ ತಾಯಿ ಮದುವೆಯಾಗಿಲ್ಲ ಎಂದರೆ ಸರಿಯಲ್ಲ. ನಾವು ಬಸಪ್ಪನ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಉತಾರಗಳನ್ನು ಮೊದಲ ಬಾರಿಗೆ ನಾನು 2007 ರಲ್ಲಿ ನೋಡಿದ್ದೇನೆ. ದಾವಾ ಆಸ್ತಿಗಳು 2007 ರಲ್ಲಿ ಬಸಪ್ಪ, ಯಲ್ಲಪ್ಪ, ಹನಮಂತಪ್ಪ ಇವರ ಹೆಸರಿನಲ್ಲಿ ಇದ್ದವು. ಈ ಮೂರು ಜನ ಹೆಸರಿನಲ್ಲಿ ದಾವಾ ಆಸ್ತಿಗಳು ಇದ್ದವು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ ಇ ನಂ.1565 ನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ. ಸದರಿ ಎಂ ಇ ನಂ.1565 ಆದಾಗಿನಿಂದ ಪ್ರತಿವಾದಿಯರು ಮಾತ್ರ ಕಬ್ಜಾ ವಹಿವಾಟಿಯಲ್ಲಿ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಡ ಪ್ರಕಾರ ಉಳುಮೆ ಮಾಡುತ್ತಿದ್ದಾರೆ ಎಂದರೆ ಹೊಡೆಯುತ್ತಿದ್ದಾರೆ ಅಂತಾ ನುಡಿಯುತ್ತಾರೆ. ದಾವಾ ಆಸ್ತಿಗಳ ಕಬ್ಜಾವಹಿವಾಟಿಯಲ್ಲಿ ಇರುತ್ತೇವೆ ಅಂತಾ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ನಾವು ದಾವಾ ಅಸ್ತಿಗಳ ಕಬ್ಜಾ ವಹಿವಾಟಿಯಲ್ಲಿ ಇಲ್ಲದೇ ಇರುವುದರಿಂದ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.13 ಮಲ್ಲಣ್ಣನವರ ಇವರಿಗೆ ಜಮೀನನ್ನು ಲಾವಣಿ ಮಾಡಲು ಕೊಟ್ಟಿದ್ದಾರೆ ಅಂತಾ ಹೇಳಿದ್ದು ಯಾವ ಇಸ್ವಿಯಲ್ಲಿ ಕೊಟ್ಟಿದ್ದಾರೆ ನನಗೆ ಗೊತ್ತಿಲ್ಲ. 02 ಎಕರೆ 2 ಗುಂಟೆ ಜಮೀನಿನಲ್ಲಿ ಖರೀದಿ ಪ್ರಕಾರ ಪ್ರತಿವಾದಿ ನಂ.13 ಕಬ್ಜಾ ವಹಿವಾಟಿಯಲ್ಲಿ ಇರುತ್ತಾರೆ ಎಂದರೆ ಸರಿ. ಸರ್ವೆ ನಂ.23/2ಬಿ ಮೂಲತಃ ಎಷ್ಟು ಎಕರೆ ಇರುತ್ತದೆ ನನಗೆ ಗೊತ್ತಿಲ್ಲ. ಮಲ್ಲಣ್ಣನವರ ಇದೇ ಆಸ್ತಿಯ ಪೈಕಿ 02 ಎಕರೆ 02 ಗುಂಟೆ ಜಮೀನನ್ನು ಖರೀದಿ ಹಿಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 25 ವರ್ಷದ ಹಿಂದೆ ಮಲ್ಲಣ್ಣನವರ ಲಾವಣಿ ಹಿಡಿದಿರುತ್ತಾರೆ ಅಂತಾ ಗೊತ್ತಾಗಿರುತ್ತದೆ, ಆದರೆ 2007 ರಲ್ಲಿ ದಾವೆ ಹಾಕುವಾಗ ಖರೀದಿ ಹಿಡಿದಿರುತ್ತಾರೆ ಅಂತಾ ಗೊತ್ತಾಗಿದೆ. 2007 ರಲ್ಲಿ ಗೊತ್ತಾದ ನಂತರ ಸದರಿ ಖರೀದಿ ಪತ್ರ ರದ್ದು ಮಾಡುವಂತೆ ದಾವೆ ಹೂಡಿಲ್ಲ ಎಂದರೆ ಸರಿ. ಮಲ್ಲಣ್ಣನವರ ಇವರಿಗೆ ಕೊಟ್ಟಿರುವ ಖರೀದಿಪತ್ರ ನಾನು ನೋಡಿಲ್ಲ. ಅದನ್ನು ತೆಗೆಸಿಲ್ಲ. ಹನಮಂತಪ್ಪ ಹೇಗೆ

ಸಹಿ ಮಾಡುತ್ತಾನೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.13 ದಾವಾ ಆಸ್ತಿ ಪೈಕಿ 02 ಎಕರೆ 02 ಗುಂಟೆ ಜಮೀನನ್ನು 49 ಸಾವಿರ ರೂಪಾಯಿ ಕೊಟ್ಟು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಹನಮಂತಪ್ಪ ತಳವಾರ ತನ್ನ ಕುಟುಂಬದ ಅವಶ್ಯಕತೆಗಾಗಿ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಖರೀದಿಪತ್ರದ ಆಧಾರದ ಮೇಲೆ ಪ್ರತಿವಾದಿ ನಂ.13 ಸಾಲ ತೆಗೆದುಕೊಂಡು ಕಬ್ಜಾ ವಹಿವಾಟಿಯಲ್ಲಿರುತ್ತಾರೆ ಎಂದರೆ ಸರಿ. ನಮಗೆ ಮತ್ತು ದಾವಾ ಆಸ್ತಿಗಳಿಗೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.13 ಖರೀದಿ ಮಾಡುವಾಗ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಹನಮಂತಪ್ಪನ ದಾಖಲೆ ಮಾತ್ರ ಇರುವುದರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖರೀದಿಪತ್ರ ಕಾಯ್ದೆ ಬದ್ಧವಾಗಿರುತ್ತದೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.